

ಹೆಗಲೇರಿಸಿಕೊಂಡು ಕೇರಿಯ ನಡಂತ್ರ ಇರುವ ಗಲ್ಲೆಬಾನಿ ಕಟ್ಟೆಮೇಲೆ ನಿಂತು ಒಂದ್ಸಲ ಜೋರಾಗಿ ತಮಟೆನ ಜಿಗಿರಿಡಿದು; “ಕೇಳ್ರಪ್ಪೋ.. ಕೇಳ್ರಿ.. ನಾಳೆ ಬೆಳಿಗ್ಗೆ ಹನುಮಂತರಾಯನ ಗುಡಿ ಮುಂದೆ ಮಾಳಿಗೆಮನೆ ಮುನಿಯಜ್ಜನ ಮೊಮ್ಮಗ ಮಂಜಣ್ಣನ ಪಂಚಾಯ್ತಿ ಐತಂತೆ. ಎಲ್ರೂ ಬರಬೇಕಂತ್ರಪ್ಪೋ...” ಅಂತೇಳಿ ಆ ಮಬ್ಬುಗತ್ತಲಿನಲ್ಲಿ ಊರಿನ ಓಣಿ ಓಣಿಗೂ ಹೋಗಿ ತಿಳಿಸಿ ಬಂದಂತೆ ಹಟ್ಟಿಯಲ್ಲಿ ಎಲ್ಲಾ ಓಣಿಗೂ ಹೋಗದೆ ಒಂದು ಹತ್ತಿರ ನಿಂತು ಹೇಳಿದ್ದ. ಅದು ಯಾಕೊ ಸರಿಕಾಣದೆ ತಪ್ಪು ನನ್ನ ಮೇಲೆ ಬರಬಾರದೆಂದು ಒಂದ್ಸಲ ಮಂಜಣ್ಣನ ಮನೆ ಮುಂದಿನ ಓಣಿಯಲ್ಲಿ ಕೂಗಿ ಹೇಳಿದ. ಮಳೆ ಬಂದಿದ್ದರಿಂದ ಆ ಕರಿಯಜ್ಜನ ತಮಟೆ ಜಣಕಿಗೆ ಹೆಜ್ಜೆ ಹಾಕಲು ಸಣ್ಣಹುಡುಗರು ಯಾರೂ ಬಂದಿರಲಿಲ್ಲ. ತಲೆಗೆ ವಲ್ಲಿಬಟ್ಟೆ ಸುತ್ತಿಕೊಂಡು, ಪಂಚೆನ ಮೇಲಕ್ಕೆ ಎತ್ತಿಕಟ್ಟಿದ್ದ. ಮಳೆ ಬಿಟ್ಟ ಮೇಲೆ ಬೀಸುವ ತಂಗಾಳಿಗೆ ತಲೆ ಕೆಡಿಸಿಕೊಳ್ಳದೆ ಬರಿಮೈಯಲ್ಲೇ ಬಂದಿದ್ದ. ಅಲ್ಲೇ ಅಂಗಳದಲ್ಲಿ ನಿಂತಿದ್ದ ಮಂಜಣ್ಣನನ್ನು ನೋಡಿ; ‘ಎಲೆ ತೋಟದ ಮಲ್ಲಪ್ಪ ಬಾರಿ ಮಸಲತ್ತು ಮಾಡಿದಾನೆ ಮಗ ಹುಷಾರು’ ಅಂತ ಮೆಲುದನಿಯಲ್ಲಿ ಹೇಳಿ ಮತ್ತೊಮ್ಮೆ ತಮಟೆಯನ್ನು ಜಿಗಿರಿಡಿದ.

ಇಂತಹದ್ದೊಂದು ಕರೆಯೋಲೆ ಬರುತ್ತಂತ ಮೊದಲೇ ನಿರೀಕ್ಷೆ ಮಾಡಿದ್ದ ಮಂಜಣ್ಣನಿಗೆ ಆಶ್ಚರ್ಯವೆನಿಸಲಿಲ್ಲ. ಆದರೆ ಮಾಡಿರೊ ಅಡಿಗೆನ ಚರಂಡಿಗೆ ಚೆಲ್ಲಿ, ಮನೆನುಗ್ಗಿ ಹೊಡಿತಾರಂತೆ ಅನ್ನೋ ಗಾಳಿಸುದ್ದಿಗೆ ಸ್ವಲ್ಪಹೊತ್ತು ಆತಂಕಿತನಾದರೂ, ಅದೇನಾಗುತ್ತೊ ಆಗಲಿ ಎನ್ನುವ ಮೊಂಡು ಧೈರ್ಯದಲ್ಲಿದ್ದ ಮಂಜಣ್ಣನ ಮನೆ ಹತ್ತಿರ ಯಾರೂ ಬಂದಿರಲಿಲ್ಲ. ಮುಂದೇನು ಮಾಡಬೇಕಂತ ಯೋಚಿಸುತ್ತಾ ಹೊರಗೆ ಚಪ್ಪರದಡಿಯಲ್ಲಿ ನಿಂತಿರುವಾಗ, ‘ಇಂತಹ ಪುಟುಗೋಸಿ ಪಂಚಾಯ್ತಿಗೆಲ್ಲ ಹೆದರಬೇಡ ಕಣೊ ಮಂಜಣ್ಣ, ನಾನಿದೀನಿ. ಅದೇನಾಗುತ್ತೊ ನೋಡೇ ಬಿಡಾನ’ ಎಂದು ತಿಪ್ಪೇಶಪ್ಪ ಧೈರ್ಯ ಹೇಳಿದ. ಆ ಗದ್ದಲಕ್ಕೆ ಒಳಗಿದ್ದ ದಾಸಪ್ಪ ಮತ್ತು ಇತರೆ ಗುರುಪುತ್ರರು ಹೊರಗೆ ಬಂದು, ‘ಪಂಚಾಯ್ತಿ ಯಾಕಂತೆ ಕರಿಯಜ್ಜ?' ಎಂದು ಕೇಳಿದ ದಾಸಪ್ಪನ ಮಾತಿಗೆ, 'ನನಗೇನು ಗೊತ್ತು ಗುರುವೆ? ಎಲೆತೋಟದ ಮಲ್ಲಪ್ಪ ಡಂಗೂರ ಸಾರು ಅಂತ ಹೇಳಿದ, ನಾನು ಸಾರಿಕೊಂಡು ಬಂದೆ' ಅಂತೇಳಿ ತಮಟೆನ ಮತ್ತೊಮ್ಮೆ ಜಿಗಿರಿಡಿಯುತ್ತಾ ಹೋದ. ‘ಬೆಳಿಗ್ಗೆ ಪಂಚಾಯ್ತಿಯಲ್ಲಿ ಅದೇನು ನಡೆಯುತ್ತೊ ನಡೀಲಿ ನೋಡನ’ ಎಂದು ಗಂಭೀರವಾಗಿ ಹೇಳಿದ ದಾಸಪ್ಪ ಇತರೆ ಗುರುಪುತ್ರರ ಜೊತೆ ಮಾತಿಗೆ ನಿಂತ.

ಅದೇ ಹೊತ್ತಿಗೆ ಮಹಾನಾಯಕ ಯುವಕ ಸಂಘದ ಗ್ರಾಮ ಶಾಖೆಯ ಅಧ್ಯಕ್ಷ ಸುರೇಶ ಮತ್ತು ಅವನ ಗೆಳೆಯರು ಬಂದು, 'ನೀನೇನು ಹೆದರಬೇಡ ಮಂಜಣ್ಣ,